# <u>ಕರ್ನಾಟಕ ರೆಡ್ಡಿಜನ ಸಂಘದ ಸದಸ್ಯರಿಗೆ 'ಸ್ಮಾರ್ಟ್ ಕಾರ್ಡ್' ವಿತರಿಸುವ ಬಗ್ಗೆ</u>

ಕರ್ನಾಟಕ ರೆಡ್ಡಿಜನ ಸಂಘದ ಎಲ್ಲಾ ಆಜೀವ ಸದಸ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ, ಕೆ.ಆರ್.ಜೆ.ಎಸ್.ನಲ್ಲಿ ಈಗಾಗಲೇ ಆಜೀವ ಸದಸ್ಯರಾಗಿ ಅನುಮೋದನೆಗೊಂಡಿರುವ ಎಲ್ಲಾ ಸದಸ್ಯರುಗಳಿಗೆ **'ಸ್ಮಾರ್ಟ್ ಕಾರ್ಡ್'** ನ್ನು ವಿತರಿಸಲು ದಿನಾಂಕ 08-03-2019ರಂದು ನಡೆದ ಸಂಘದ 42ನೇ ಆಡಳಿತ ಮಂಡಳಿ ಹಾಗೂ 13ನೇ ಸಲಹಾ ಸಮಿತಿಯ ಜಂಟಿ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿದೆ.

ಕರ್ನಾಟಕ ರೆಡ್ಡಿಜನ ಸಂಘದ ಬೈಲಾ ನಿಯಮಗಳ ಪ್ರಕಾರ. ಬೈಲಾ ಉಪನಿಯಮ 7ಕ್ಕೆ ತಿದ್ದುಪಡಿಯಾದ 6 (ಎಚ್) ಹೊಸ ಉಪನಿಯಮದಂತೆ, "ಎಲ್ಲಾ ಸದಸ್ಯರು ರೂ. 200ನ್ನು ಪಾವತಿ ಮಾಡಿ ರೆಡ್ಡಿಜನ ಸಂಘದ ಆಡಳಿತ ಮಂಡಳಿಯ ತೀರ್ಮಾನದಂತೆ ಸ್ಮಾರ್ಟ್ ಕಾರ್ಡ್ ಪಡೆಯತಕ್ಕದ್ದು. ಬೈಲಾದ ಈ ನಿಯಮ ಅನುಮೋದನೆಗೊಂಡ ಮೂರು ತಿಂಗಳುಗಳೊಳಗಾಗಿ ಎಲ್ಲಾ ಸದಸ್ಯರು ಆಡಳಿತ ಮಂಡಳಿಯ ತೀರ್ಮಾನದಂತೆ ತಮ್ಮ ಸ್ಮಾರ್ಟ್ ಕಾರ್ಡ್‌ನ್ನು ಪಡೆಯತಕ್ಕದ್ದು. ಈ ರೀತಿಯ ಸ್ಮಾರ್ಟ್ ಕಾರ್ಡ್ ಪಡೆದವರು ಮಾತ್ರ ಸಂಘದ ಸಕ್ರಿಯ ಸದಸ್ಯರಾಗಿರುತ್ತಾರೆ ಹಾಗೂ ಮತ ಚಲಾಯಿಸಲು / ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಹತೆ ಹೊಂದಿರುತ್ತಾರೆ".

ಸ್ಮಾರ್ಟ್ ಕಾರ್ಡ್ ಅರ್ಜಿ ನಮೂನೆಯನ್ನು ಸಂಘದ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಒಮ್ಮೆ ಇಂಟರ್‌ನೆಟ್ ಸೌಲಭ್ಯ ಇಲ್ಲದೇ ಇರುವ ಆಜೀವ ಸದಸ್ಯರು ಬೆಂಗಳೂರಿನಲ್ಲಿರುವ ಪ್ರಧಾನ ಕಛೇರಿಗೆ ಬಂದು ಕಛೇರಿಯ ವೇಳೆಯಲ್ಲಿ ನೇರವಾಗಿ ಅರ್ಜಿ ನಮೂನೆಯನ್ನು ಪಡೆದು ತಮ್ಮ ಸಂಪೂರ್ಣ ವಿವರಗಳೊಂದಿಗೆ ಭರ್ತಿ ಮಾಡಿದ ಅರ್ಜಿಯನ್ನು ಸ್ಮಾರ್ಟ್ ಕಾರ್ಡ್ ಶುಲ್ಕ ರೂ. 200/-ಗಳು ಹಾಗೂ ಇತ್ತೀಚಿನ ಎರಡು ಭಾವಚಿತ್ರಗಳು ಮತ್ತು ಯಾವುದಾದರೂ ಗುರುತಿನ ಚೀಟಿಯ ನಕಲು ಪ್ರತಿಯನ್ನು ಲಗತ್ತಿಸಿ ಸಲ್ಲಿಸಬೇಕಾಗುತ್ತದೆ.

ಕೆ.ಆರ್.ಜೆ.ಎಸ್.ನ ಪ್ರಧಾನ ಕಛೇರಿಯಲ್ಲಿ 'ಸ್ಮಾರ್ಟ್ ಕಾರ್ಡ್' ವಿತರಣೆಯ ಪ್ರಕ್ರಿಯೆಯು ದಿನಾಂಕ 15-3-2019ರಿಂದ 15-5-2019ರವರೆಗೆ ಚಾಲ್ತಿಯಲ್ಲಿರುತ್ತದೆ.

ಆದ್ದರಿಂದ ಸಂಘದ ಆಜೀವ ಸದಸ್ಯರುಗಳು ತಪ್ಪದೇ ಸ್ಮಾರ್ಟ್ ಕಾರ್ಡ್‌ನ್ನು ಪಡೆಯಲು ವಿನಂತಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : www.reddyjanasangha.org ದೂರವಾಣಿ ಸಂಖ್ಯೆ : 080-25534194.

ಸಹಿ/-

**(ಮುನಿನಾಗಪ್ಪ)**
ಪ್ರಧಾನ ಕಾರ್ಯದರ್ಶಿ